

ಚಿತ್ರಗಳು: ಸೃಜನ್

ಅವನ ಅರಿವಿಗೇ ಬರುವುದಿಲ್ಲ. ಅವನಿಗೇನು? ಆಫೀಸಿನವರು ಕೊಟ್ಟ ಕಾರ್‌ನಲ್ಲಿ ಜಮ್ಮಂತ ಹೋಗಿಬಿಡುತ್ತಾನೆ. ಸೋಫಾದ ಮೇಲೆ ಕುಕ್ಕರಿಸಿದರೆ ಕೆಲಸಕ್ಕೆ ಹೋಗದ ಅವನ ಹೆಂಡತಿ ಬಿಸಿಬಿಸಿ ಕಾಫಿ ತಂದುಕೊಡುತ್ತಾಳೆ. ಬೆಳಗ್ಗೆ ಅರ್ಧ ಓದಿದ ಪತ್ರಿಕೆಯನ್ನೋ ಟೀವಿಯಲ್ಲಿ ಬರುವ ವಾರ್ತೆಗಳನ್ನೋ ನೋಡುತ್ತಾ ಕುಳಿತರೆ ಹೆಂಡತಿ ಊಟಕ್ಕೆ ಬನ್ನಿ ಎಂದು ತಟ್ಟೆ ಇಟ್ಟು ಕರೆಯುತ್ತಾಳೆ. ಅವನಿಗೇನು ಹೊರಗೆ ಹೋಗಿ ಕೆಲಸ ಮಾಡುವ ಹೆಣ್ಣು ಮಕ್ಕಳಂತೆ ಮನೆಗೆ ಧಾವಿಸಿ ಅಡುಗೆ ಮಾಡುವ ಅಗತ್ಯವಿದೆಯೇ?

ಹಾಗೂ ಹೀಗೂ ಮಾಡಿ, ಏಳು ಗಂಟೆಗೆ ಹೊರಬೀಳುವಾಗ ಸಾಕು ಸಾಕಾಗಿತ್ತು. ‘ನಾನಿನ್ನು ಬರಲಾ ಸರ್?’ ಎಂದು ಹೇಳಿದಾಗ ಒಮ್ಮೆ ಮುಖ ನೋಡಿ, ಕಿಟಕಿಯ ಮೂಲಕ ಹೊರಗೆ